ಕುರಿತು ಕಸ್ತೂರಿಯ ಕಿವಿ ತಲುಪಿಸಿದ್ದಾರೆ ಸುವರ್ಣ. ಎಲ್ಲಾ ವಿಧದಲ್ಲೂ ಅನುರೂಪವಾದಂತವರ ಮನೆಗೆ ಅವಳನ್ನು ಸೇರಿಸಿ ಬೀಗಿದ್ದಾರೆ. ಹಿರಿಮಗನಿಗೆ ಚೆಲುವಾದ ಹೆಣ್ಣು ಹುಡುಕಿ ಮನೆ ತುಂಬಿಸಿಕೊಂಡಿದ್ದಾರೆ. ಇಷ್ಟನ್ನು ನೆನೆಸಿಕೊಳ್ಳುವಾಗ ಕಸ್ತೂರಿಗೆ ಮನಸ್ಸು ಭಾರವಾಗುತ್ತದೆ. ದೃಷ್ಟಿಬೊಟ್ಟಿನಂತೆ ಈ ಮನೆಗೆ ಸೇರಿಕೊಂಡೆನೇ ತಾನು? ಇಂತಾ ಎಡವಟ್ಟು ಮಾಡಿ ರಾಜೀವ ತನ್ನನ್ನು ಯಾಕೆ ಇಕ್ಕಟ್ಟಿಗೆ ಸಿಲುಕಿಸಿಟ್ಟ? ಅತ್ತೆಯ ಪಾಲಿಗೆ ತಾನು ನುಂಗಲೂ ಆಗದ, ಉಗುಳಲೂ ಆಗದ ಬಿಸಿ ತುಪ್ಪ. ಯಾವತ್ತೂ ಅಮ್ಮನ ಮಾತು ಮೀರದ ವಿಧೇಯ ಮಗ ಮದುವೆಯ ವಿಷಯದಲ್ಲಿ ಅಮ್ಮನಿಗೆ ತಿರುಗಿ ಬಿದ್ದಿದ್ದು ಯಾಕೆ? ಹಟ ಹಿಡಿದಿದ್ದು ಯಾಕೆ? 'ಮದುವೆಗಳು ಸ್ವರ್ಗದಲ್ಲಿ ನಡೆದುಬಿಟ್ಟಿರುತ್ತವೆ' ಎನ್ನುವ ಹೇಳಿಕೆ ಮಾತನ್ನು ನಂಬಬೇಕೇನೋ ಎನಿಸುವಂತಾ ಪರಿಸ್ಥಿತಿ ಸೃಷ್ಟಿಯಾಗಿದ್ದು ಹೇಗೆ? ಕೈಲಿ ಪುಸ್ತಕ ಹಿಡಿದಿದ್ದರೂ ಯಾವತ್ತಿನಂತೆ ಅದರಲ್ಲಿ ಮಗ್ನತೆ ಸಾಧ್ಯವಾಗದೆ ನೆನಪುಗಳಲ್ಲಿ ಕಳೆದು ಹೋಗಿದ್ದ ಕಸ್ತೂರಿ ಪುಸ್ತಕ ಮುಚ್ಚಿ ಬದಿಗಿಟ್ಟು ಗಂಡನ ಕಡೆ ತಿರುಗಿದಳು. ವಾರ್ಡ್‌ರೋಬಿನಲ್ಲಿದ್ದ ಬಟ್ಟೆಗಳನ್ನು ಆಯ್ದು ಆಯ್ದು ಸೂಟ್‌ಕೇಸಿನಲ್ಲಿ ಜೋಡಿಸಿಕೊಳ್ಳುತ್ತಿದ್ದವನನ್ನು ನೋಡಿ ಅರೆಕ್ಷಣ ಅಸೂಯೆಯಾಯ್ತು. ಈ ಮನೆಯಲ್ಲಿ ಎಲ್ಲಾ ಒಂದು, ತಾನು ಮಾತ್ರಾ ಬೇರೆ ಅನಿಸತೊಡಗಿತು. 'ಹೆಣ್ಣುಮಕ್ಕಳ ಚಂದಕ್ಕೆ ಪ್ರಾಮುಖ್ಯತೆ ಕೊಡುವ ಕಾಲ ಯಾವತ್ತೋ ಮುಗಿದು ಹೋಯ್ತು' ಅನ್ನುವ ಹೇಳಿಕೆ ಮಾತು ಏನೇ ಇದ್ದರೂ ಅದೆಲ್ಲಾ ಗಂಟಲ ಮೇಲಿನ ಮಾತು. 'ರೂಪ' ಅನ್ನುವುದಕ್ಕೆ ಅಗ್ರಪೀಠ ಇದ್ದೇ ಇದೆ. ಜನರನ್ನು ಮೊದಲಿಗೆ ಆಕರ್ಷಿಸುವುದು ಎದುರಿನವರ ರೂಪ. ಬಾಹ್ಯ ಸೌಂದರ್ಯ. ಬುದ್ಧಿವಂತೆಯೋ, ದಡ್ಡಿಯೋ ಮೇಲ್ನೋಟಕ್ಕೆ ಗೊತ್ತಾಗುವ ಸಾಧ್ಯತೆ ಇಲ್ಲವಲ್ಲ? ಇಷ್ಟೆಲ್ಲಾ ಯಾಕೆ? ಎಂತೆಂತವರನ್ನೋ ಮರುಳು ಮಾಡಿ ಬುಟ್ಟಿಗೆ ಬೀಳಿಸಿಕೊಂಡು ಅವರ ದೌರ್ಬಲ್ಯವನ್ನು ನಗದೀಕರಿಸಿಕೊಳ್ಳುವ, ಕಾರ್ಯಸಾಧನೆಗೆ ಬಳಸಿಕೊಳ್ಳುವ 'ಹನಿ ಟ್ರ್ಯಾಪ್' ಎನ್ನುವ ಖೆಡ್ಡಾದ ಹಿಂದೆ ಕೆಲಸ ಮಾಡುವುದು ಹೆಣ್ಣಿನ ಸೌಂದರ್ಯವಲ್ಲದೆ ಮತ್ತೇನು? ಟೀವಿಗೀವಿಗಳಲ್ಲಿ ನೋಡಿ ನೋಡಿ ಹೆಣ್ಣು ನಖಶಿಖಾಂತ ಅಲಂಕರಿಸಿಕೊಂಡು ಹೇಗಿದ್ದರೆ ಚೆನ್ನ ಎನ್ನುವ ಕುರಿತು ಈಗ ಒಂದು ಹೊಸ ಕಲ್ಪನೆಯೇ ಹುಟ್ಟಿಕೊಂಡು ಬಿಟ್ಟಿದೆ. ಅತ್ತೆ ಇರಲಿ, ವಾರಗಿತ್ತಿ ಇರಲಿ ಅಗತ್ಯಕ್ಕಿಂತಾ ಹೆಚ್ಚು ಬಾಹ್ಯರೂಪಕ್ಕೆ ಆದ್ಯತೆ ಕೊಡುವುದು ಕಸ್ತೂರಿಗೆ ಗೊತ್ತಿಲ್ಲದ ಸಂಗತಿಯಲ್ಲ. ತೀರಾ ಸಾಧಾರಣ ರೂಪಿನ, ಸಾದುಗಪ್ಪಿನ ಸೊಸೆಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ಅತ್ತೆಗೆ ಯಾವತ್ತೂ ಹಿಂದೇಟು. 'ನನ್ನ ಕಿರಿ ಸೊಸೆ' ಎಂದು ಪರಿಚಯಿಸುವಾಗ ಎದುರಿನವರು ಅಪನಂಬುಗೆಯ ಕಣ್ಣುಗಳಿಂದ ನೋಡಬಹುದಾದ ಕಲ್ಪನೆಯಿಂದ ಮುಜುಗರ. ಎಲ್ಲಾ ಅರ್ಥ ಮಾಡಿಕೊಂಡಿದ್ದಾಳೆ ಕಸ್ತೂರಿ. ಮನಸ್ಸು ವ್ಯಗ್ರಗೊಂಡಾಗ ಅದೆಷ್ಟೋ ಸಲ ಗಂಡನೊಡನೆ ಕೇಳಿದ್ದಾಳೆ,

"ನೀವ್ಯಾಕೆ ನನ್ನ ಮದುವೆ ಮಾಡಿಕೊಂಡ್ರಿ?"

★★★

ತಮ್ಮ ಶಾಖೆಗೆ ಹೊಸದಾಗಿ ವರ್ಗವಾಗಿ ಬಂದ ಮ್ಯಾನೇಜರ್ ಹೀಗಿರಬಹುದು ಎನ್ನುವ ಕಲ್ಪನೆ ಅಲ್ಲಿನ ಸಿಬ್ಬಂದಿಗೆ ಇರಲು ಸಾಧ್ಯವಿರಲಿಲ್ಲ. ಮೊದಲ ಬಾರಿ ಅವನನ್ನು ಕಂಡಾಗ ಕಸ್ತೂರಿಯ ಸಹೋದ್ಯೋಗಿನಿ ತನ್ನ ಮೆಚ್ಚುಗೆ ಮುಚ್ಚಿಟ್ಟುಕೊಳ್ಳಲಾಗದೆ ಉದ್ಗಾರ ತೆಗೆದಿದ್ದಳು,

"ವಾವ್, ಇದೇನೇ ಇದು, ಸಿನಿಮಾ ಫೀಲ್ಡಿಗೆ ಹೋಗ್ಬೇಕಾದ ಪ್ರಾಣಿ ತಪ್ಪಿ ಬ್ಯಾಂಕಿಗೆ ಸೇರ್ಕೊಂಬಿಟ್ಟಿದೆ?"

ಉಳಿದವರ ಹಾಗೆ ಬಾಯಿ ಕಳೆದುಕೊಂಡು ರಾಜೀವನ ಕಡೆ ನೆಟ್ಟ ನೋಟ ಬೀರದಿದ್ದರೂ ಕಸ್ತೂರಿಯ ಒಳ ಮನಸ್ಸಿನಲ್ಲಿ ಮೆಚ್ಚುಗೆಯ ಭಾವವೊಂದು ಕದಲಿದಂತಾಗಿದ್ದು ಸುಳ್ಳಲ್ಲ. ಚಂದದ ಕುರಿತು ಮಾತು ಬಂದಾಗಲೆಲ್ಲಾ ಅವಳು ವಿಚಲಿತಳಾಗುತ್ತಾಳೆ. ಮೇಲ್ನೋಟಕ್ಕೆ